57

# ಪಟ್ಟಣದ ನಾಶನಕ್ಕೆ ಪೂರ್ವದಲ್ಲಿದ್ದ ಸ್ಥಿತಿ

# (24:4-14)

ಯೇಸು ತನ್ನ ಉಪದೇಶವನ್ನು ಹಲವು "ಸೂಚನೆಗಳಿಲ್ಲದೆ" ಪ್ರಾರಂಭಿಸಿದನು. ಯೆರೂಸಲೇಮಿನ ನಾಶನ ಯೆಹೂದ್ಯರಿಗೆ ಬಹಳ ನೋವಿನ ಸಂಗತಿಯಾಗಿತ್ತು ಯಾರು ಯೇಸುವಿನ ಪ್ರವಾದನೆಯ ನೆರವೇರಿಕೆಯನ್ನು ಎದುರು ನೋಡುತ್ತಿದ್ದಾರೋ ಯಾವುದೇ ಮತ್ತು ಎಲ್ಲವು ಸಂಭವಿಸಲಿಕ್ಕಿರುವದಕ್ಕೆ ಸೂಚನೆಯಾಗಿದ್ದವು. ಕ್ರಿಸ್ತನು ತನ್ನ ಹಿಂಬಾಲಕರು ತಪ್ಪು ದಾರಿಗೆ ನಡೆಸಲ್ಪಡಬಾರದು, ಆದದರಿಂದ ಆತನು ಮೊದಲು ಅವರನ್ನು ತಪ್ಪುದಾರಿಗೆ ಎಳೆಯಲು ಸಾಧ್ಯವಿರುವ ಸೂಚನೆಗಳ ಕುರಿತು ಎಚ್ಚರಿಸುತ್ತಾನೆ.

## "ಮೋಸ ಹೋಗಬೇಡಿರಿ" (24:4-8)

**4ನಮಗೆ ಹೇಳು ಅನ್ನಲು ಯೇಸು ಅವರಿಗೆ ಉತ್ತರವಾಗಿ ಹೇಳಿದ್ದೇನಂದರೆ - ಯಾರಾದರೂ ನಿಮ್ಮನ್ನು ಮೋಸಗೊಳಿಸಾರು ನೋಡಿಕೊಳ್ಳಿರಿ. 5ಯಾಕಂದರೆ ಅನೇಕರು ಬಂದು ನನ್ನ ಹೆಸರನ್ನು ಎತ್ತಿಕೊಂಡು - ನಾನು ಕ್ರಿಸ್ತನು, ನಾನು ಕ್ರಿಸ್ತನು ಎಂದು ಹೇಳಿ ಎಷ್ಟೋ ಜನರನ್ನು ಮೋಸಗೊಳಿಸುವರು. 6ಇದಲ್ಲದೆ ಯುದ್ಧಗಳಾಗುವದನ್ನೂ ಯುದ್ಧವಾಗುವ ಹಾಗಿದೆ ಎಂಬ ಸುದ್ದಿಗಳನ್ನೂ ನೀವು ಕೇಳಬೇಕಾಗಿರುವದು. ಕಳವಳಪಡದಂತೆ ನೋಡಿಕೊಳ್ಳಿರಿ; ಯಾಕಂದರೆ ಹಾಗಾಗುವದು ಅಗತ್ಯ. ಆದರೂ ಇದು ಇನ್ನೂ ಅಂತ್ಯಕಾಲವಲ್ಲ. 7ಜನಕ್ಕೆ ವಿರೋಧವಾಗಿ ಜನವೂ ರಾಜ್ಯಕ್ಕೆ ವಿರೋಧವಾಗಿ ರಾಜ್ಯವೂ ಏಳುವವು; ಮತ್ತು ಅಲ್ಲಲ್ಲಿ ಬರಗಳು ಬರುವವು, ಭೂಕಂಪಗಳು ಆಗುವವು; 8ಇವೆಲ್ಲಾ [ನೂತನಕಾಲವು ಹುಟ್ಟುವ] ಪ್ರಸವವೇದನೆಯ ಪ್ರಾರಂಭ.**

**ವಚನಗಳು 4, 5.** *ಸುಳ್ಳು ಕ್ರಿಸ್ತರು.* **ಯೇಸು** ತನ್ನ ಹಿಂಬಾಲಕರಿಗೆ ಸುಳ್ಳುಕ್ರಿಸ್ತರಿಂದ ಮೋಸಹೋಗಬೇಡಿರಿ, ಮೆಸ್ಸೀಯನಂತೆ ನಟಿಸುವವರು (24:23, 24). **ಅನೇಕರು** ಈ ಮೋಸಗಾರರನ್ನು ಹಿಂಬಾಲಿಸುತ್ತಾರೆ, ಕರ್ತನ ಶಿಷ್ಯರು ಹೀಗೆ ಮಾಡಬಾರದು. 16:13-20ರಲ್ಲಿ ಬರುವ ಪರಿವರ್ತನೆಗೆ ಸಂಬಂಧಿಸಿದಂತೆ ಶಿಷ್ಯರು ಯೇಸು ವಾಗ್ದತ್ತ ಮೆಸ್ಸೀಯನಾಗಿದ್ದಾನೆ ಎಂದು ನಂಬಿದ್ದಾರೆ, ಆದರೆ ಅವರ ನಂಬಿಕೆ ಬರಲಿಕ್ಕಿರುವ ದಿನಗಳಲ್ಲಿ ಗಂಭೀರವಾದ ಪರೀಕ್ಷೆಗೆ ಗುರಿಯಾಗುತ್ತದೆ. ಅವರ ನಾಯಕನಾದ ಯೇಸುವನ್ನು ಶಿಲುಬೆಗೆ ಹಾಕಿದಾಗ ಅವರಿಗಾದ ನಾಯಕನ ನಷ್ಟ ಅವರಿಗೆ ಪಂಥಾಹ್ವಾನ ನೀಡುವಂಥದ್ದಾಗಿದೆ. ಪುನರುತ್ಥಾನವು ಅವರು ಎದುರಿಸಲಿಕ್ಕಿರುವ ಎಲ್ಲಾ ಸಮಸ್ಯೆಯನ್ನು ಪರಿಹರಿಸುವದಿಲ್ಲ.[1]

**ಅನೇಕರು** ಸುಳ್ಳು ಮೆಸ್ಸೀಯರು ಮತ್ತು ಇನ್ನಿತರ ಕ್ರಾಂತಿಕಾರಿ ನಾಯಕರು ಮೊದಲನೆಯ ಶತಮಾನದಲ್ಲಿ ಹುಟ್ಟಿಕೊಳ್ಳುತ್ತಾರೆ, ಅನೇಕಾವರ್ತಿ ತಮ್ಮ ಸುತ್ತಲು ಸೈನ್ಯವನ್ನು ಸಂಗ್ರಹಿಸಿಕೊಂಡು. ರಬ್ಬಾನ ಗಮಲಿಯೇಲನು ಇಂಥಹಾ ಇಬ್ಬರು ಮನುಷ್ಯರನ್ನು ಉಲ್ಲೇಖಿಸುತ್ತಾನೆ, ಗಲಿಲಾಯದ ಥೈದನು ಮತ್ತು ಯೂದನು. ಇವರು ಕೊನೆಗೆ ಕೊಲ್ಲಲ್ಪಟ್ಟರು ಮತ್ತು ಅವರ ಹಿಂಬಾಲಕರು ಚದುರಿಹೋದರು (ಅಪೊಸ್ತಲರ ಕೃತ್ಯಗಳು 5:36, 37).[2] ಅಪೊಸ್ತಲರ ಕೃತ್ಯದಲ್ಲಿ ಇನ್ನೊಬ್ಬನನ್ನು ಉಲ್ಲೇಖಿಸಲಾಗಿದೆ ಅವನು ಐಗುಪ್ತದವನು, ಅವನು

ನಾಲ್ಕು ಸಾವಿರ ಭಯೋತ್ಪಾದಕರನ್ನು ಮರುಭೂಮಿಯಲ್ಲಿ ನಡೆಸಿದನು (ಅಪೊಸ್ತಲರ ಕೃತ್ಯಗಳು 21:38).[3] ಇಂಥಹ ವಿಷಯದಲ್ಲಿ ನಿರ್ಧರಿಸುವದು ಕಷ್ಟದಾಯಕವಾಗಿದೆ ತನ್ನನ್ನು ತಾನು ಕ್ರಿಸ್ತನೆಂದು ಹೇಳಿಕೊಳ್ಳುವ ಪ್ರತಿಮನುಷ್ಯನು ಸರಿಯಾಗಿದ್ದಾನೋ ಇಲ್ಲವೋ. ಆದಾಗ್ಯೂ, ಹೀಗೆ ಮಾಡಿದವರು ಬಂದಿದ್ದಾರೆ. Donald A. Hagner ರವರು ಮೆಸ್ಸೀಯನೆಂದು ಹೇಳಿಕೊಳ್ಳುವ ಸಾಕ್ಷಿ (ಕ್ರಿ.ಶ. 135) Bar Kokhba ನವರೆಗೆ ಬರಲಿಲ್ಲ ಎಂದು ಹೇಳುತ್ತಾರೆ.[4]

**ವಚನಗಳು 6, 7.** *ಯುದ್ಧಗಳಾಗುವದನ್ನು ಯುದ್ಧವಾಗುವ ಹಾಗಿದೆ ಎಂಬ ಸುದ್ದಿಗಳು ಮತ್ತು ಪ್ರಕೃತಿ ವಿಕೋಪಗಳು.* ಯೇಸು ತನ್ನ ಶಿಷ್ಯರಿಗೆ **ಇದಲ್ಲದೆ ಯುದ್ಧಗಳಾಗುವದನ್ನೂ ಯುದ್ಧವಾಗುವ ಹಾಗಿದೆ ಎಂಬ ಸುದ್ದಿಗಳನ್ನೂ ನೀವು ಕೇಳಬೇಕಾಗಿರುವದು** ಎಂದು ಎಚ್ಚರಿಸುತ್ತಾನೆ. ಇಲ್ಲಿಯ ಭಾಷೆ ಅವರು ವೈಯಕ್ತಿಕವಾಗಿ ಯುದ್ಧದಲ್ಲಿ ಭಾಗವಹಿಸುವದಿಲ್ಲ ಎಂಬುದನ್ನು ಸೂಚಿಸುತ್ತದೆ. ಆದರೂ, ಅಂಥಹ ಸುದ್ದಿಗಳನ್ನು ಕೇಳುವದರಿಂದ ಯಾರಾದರೂ ತೊಂದರೆಗೆ ಒಳಗಾಗುತ್ತಾರೆ ಮತ್ತು ಭಯಭೀತರಾಗುತ್ತಾರೆ. ಆದುದರಿಂದ ಕರ್ತನು, **ಕಳವಳಪಡದಂತೆ ನೋಡಿಕೊಳ್ಳಿರಿ ಯಾಕೆಂದರೆ ಹಾಗಾಗುವದು ಅಗತ್ಯ, ಆದರೂ ಇದು ಇನ್ನೂ ಅಂತ್ಯಕಾಲವಲ್ಲ** ಎಂದು ಹೇಳಿದನು. ಕ್ರಿ.ಶ. 70ರಲ್ಲಿ ಯೆರೂಸಲೇಮಿನ ನಾಶನಕ್ಕೆ ಪೂರ್ವದಲ್ಲಿ ಅಸಂಖ್ಯಾತ ಯುದ್ಧಗಳು ನಡೆದವು. ನಿಜವಾಗಿಯೂ ಕ್ರಿ.ಶ 69ರ ಪೂರ್ವಕಾಲವನ್ನು "ನಾಲ್ಕು ಸಾಮ್ರಾಟರ ವರ್ಷವೆಂದು" ಹೆಸರಾಗಿದೆ, ಇದು ನಾಗರೀಕ ಯುದ್ಧಗಳು ಮತ್ತು ರಕ್ತಪಾತದ ವರ್ಷವೆಂದು ಗುರುತಿಸಲ್ಪಟ್ಟಿದೆ. Nero, ಚಕ್ರವರ್ತಿಯ ಮರಣದ ಹಿಂದೆಯೇ, ಮೂರು ಜನರು ಅಲ್ಪಕಾಲದವರೆಗೆ ಆಡಳಿತ ಮಾಡಿದರು: Galba, Otho, and Vitellius.[5] Vespasian ಈತನು ನಿಜವಾಗಿಯೂ, ಸಿಂಹಾಸನವನ್ನು ಪಡೆಯುವದಕ್ಕಾಗಿ ಯೆರೂಸಲೇಮಿನ ಮುತ್ತಿಗೆಯನ್ನು ಕೈ ಬಿಟ್ಟನು.[6] ಕೇವಲ ಶಿಷ್ಯರು ಇಂಥಹಾ ಸಂಗತಿಗಳನ್ನು ಕೇಳಿದ್ದಾರೆಂದು, ಅವರು "ಅಂತ್ಯ" (*telos*) ಬಂದಿದೆ ಎಂಬ ನಿರ್ಧಾರಕ್ಕೆ ಬರಲು ಸಾಧ್ಯವಿಲ್ಲ (ನೋಡಿರಿ 24:3).

ಯೇಸು ಮುಂದುವರೆದು, **ಜನಕ್ಕೆ ವಿರೋಧವಾಗಿ ಜನವೂ ರಾಜ್ಯಕ್ಕೆ ವಿರೋಧವಾಗಿ ರಾಜ್ಯವೂ ಏಳುವವು; ಮತ್ತು ಅಲ್ಲಲ್ಲಿ ಬರಗಳು ಬರುವವು, ಭೂಕಂಪಗಳು ಆಗುವವು** ಎಂದು ಹೇಳಿದ ಭವಿಷ್ಯವಾಣಿಯ ನಂತರ ಅನೇಕ ದಿನಗಳವರೆಗೆ ರೋಮನ್‌ರು ಕ್ರಿ.ಶ. 70ರಲ್ಲಿ ಯೆರೂಸಲೇಮಿನ ನಾಶನದವರೆಗೆ ಅನೇಕ ತೊಂದರೆಗಳಿಂದ ಪೀಡಿಸಿದರು. ಯೇಸು ಯೂದಾಯದಲ್ಲಿ ನಡೆಯುವ ಗಲಬೆಯನ್ನು ಮನಸ್ಸಿನಲ್ಲಿಟ್ಟುಕೊಂಡಿರಬಹುದು.

Robert A. Guelich ರವರು ರೋಮನ್ನರು ಮತ್ತು ಯೆಹೂದ್ಯರ ಮಧ್ಯದಲ್ಲಿ ಯುದ್ಧಕ್ಕೆ ಕಾರಣವಾದ ಕೆಲವು ವಿಶಿಷ್ಟವಾದ ಸಂಗತಿಗಳನ್ನು ಎತ್ತಿ ತೋರಿಸಿದ್ದಾರೆ.[7] ರೋಮನ್ನರ ಅಧಿಕಾರ ಪತ್ರ ಹೊಂದಿದ ಕಾರ್ಯಭಾರಿ Florus ಕ್ರೂರತನ (ಕ್ರಿ.ಶ. 64-66) ಯುದ್ಧಕ್ಕೆ ವೇದಿಕೆಯನ್ನು ಸಿದ್ಧಮಾಡಿದನು (ಕ್ರಿ.ಶ. 66-74).[8] ಅವನು ನಾಗರೀಕ ಹಕ್ಕುಗಳ ಗಲಬೆಯಲ್ಲಿ ಯೆಹೂದ್ಯರ ವಿರುದ್ಧವಾಗಿ ಗ್ರೀಕ್‌ರಿಗೆ ಬೆಂಬಲಿಸಿದನು. ಅವನು ಪವಿತ್ರ ದೇವಾಲಯದ ಖಜಾನೆಯಿಂದ ಸರಕಾರದ ಖರ್ಚುಗಳನ್ನು ತೂಗಿಸಲು ಹಣವನ್ನು ಸಹ ತೆಗೆದುಕೊಂಡನು ಮುಂದೆ ದಂಗೆಕೋರರು ಆತನನ್ನು ಬಂಧಿಸಿ ಶಿಲುಬೆಗೆ ಹಾಕಿದರು.[9] Florusನು ಸೈನ್ಯದಲ್ಲಿ ಹತ್ತರಲ್ಲೊಂದು ಭಾಗವನ್ನು ಯೆರೂಸಲೇಮಿನೆಡೆಗೆ ನಡೆಸಿದನು, ಯೆಹೂದ್ಯರು ಅವರನ್ನು Antonia Fortress ತಲುಪುವದನ್ನು ತಡೆಹಿಡಿದರು. ಈ ಯುದ್ಧದಲ್ಲಿ ಅನೇಕರು ಮರಣಹೊಂದಿದರು.[10]

ಯೆಹೂದ್ಯರು ಅನ್ಯಜನರನ್ನು ರೋಮನ್ ಚಕ್ರವರ್ತಿಯನ್ನು ಒಳಗೊಂಡು ಯಜ್ಞವನ್ನು ಅರ್ಪಿಸಲು ಬಂಧಿಸುವದರ ಮೂಲಕ ಪ್ರತಿಕಾರವನ್ನು ತೀರಿಸಿಕೊಂಡರು.[11] ಈ ಕಾರ್ಯವು ದೇಶದ್ರೋಹದ ಕಾರ್ಯವೆಂದು ದೃಷ್ಟಿಸಲಾಯಿತು. ಯೆಹೂದ್ಯರ ಕ್ರಾಂತಿಕಾರರು ರೋಮನ್ನರ ಕೆಲವು ಸೈನ್ಯದ ಮೇಲೆ ಆಕ್ರಮಣ ಮಾಡಿದರು, ಅನೇಕ ಸೈನಿಕರನ್ನು ಕೊಂದರು ಮತ್ತು

ಅವರ ಅತ್ಯಂತ ಅನೂಕಲಕರವಾದ ಕೋಟೆಗಳನ್ನು ವಶಮಾಡಿಕೊಂಡರು, Masada, Machaerus, ಮತ್ತು Cypros ಸೇರಿದ್ದವು.[12] ಮುಂದೆ ಹಿಂಸಾತ್ಮಕ ಕಾರ್ಯಗಳು ಕೈಸರೆ ಮತ್ತು ದೆಕಫೋಲಿ ಮತ್ತು ಸೈರಾನ್ ಪಟ್ಟಣಗಳಲ್ಲಿ ನಡೆದವು.[13]

ಈ ಅವ್ಯವಸ್ಥೆಯ ಅವಧಿಯನ್ನು ಯೆಹೂದ್ಯರಲ್ಲಿ ಅನೇಕ ವಿರೋಧಗಳು ಉಂಟಾದ ಅವಧಿ ಎಂದು ಗುರುತಿಸಲಾಗಿದೆ. Guelich ರವರು ಹೀಗೆ ಬರೆದಿದ್ದಾರೆ, "ಒಂದು ಕಡೆ, ರಾಜಕೀಯ ಬಲಗಳನ್ನು ಉಗ್ರರು ಮತ್ತು ಶಾಂತಿಪಕ್ಷದವರು ಎಂದು ವಿಭಾಗಿಸಲಾಯಿತು, ಯುದ್ಧವನ್ನು ಬಯಸುವ ಗುಂಪು ಮತ್ತು ಶಾಂತಿಯನ್ನು ಬಯಸುವ ಗುಂಪು. ಇನ್ನೊಂದೆಡೆ ಉಗ್ರರು ಶಾಂತಿಪಕ್ಷದವರನ್ನಷ್ಟೇ ಅಲ್ಲ ತಮ್ಮನ್ನು ತಾವೇ ಎರಡು ಭಾಗಗಳನ್ನಾಗಿ ಮಾಡಿಕೊಂಡರು."[14]

ಪ್ರಾಚೀನ ಐತಿಹಾಸಿಕ ತಜ್ಞರು ಹಲವು "ಬರಗಾಲಗಳನ್ನು ಮತ್ತು ಭೂಕಂಪಗಳನ್ನು" ದಾಖಲಿಸುತ್ತಾರೆ. ರೋಮನ್ನ ಲೋಕದಲ್ಲಿ ಯೇಸುವಿನ ಭವಿಷ್ಯವಾಣಿಯ ಸಮಯದಿಂದ ಮತ್ತು ಯೆರೂಸಲೇಮಿನ ಅಂಧಪತನದವರೆಗೆ. ಉದಾಹರಣೆಗೆ, ಲೂಕನು ಕ್ರಿ.ಶ. 46ರ ಸುಮಾರಿಗೆ ಬರಗಾಲವನ್ನು ದಾಖಲಿಸುತ್ತಾನೆ (ಅಪೊಸ್ತಲರ ಕೃತ್ಯಗಳು 11:28), ಇದನ್ನು Josephusನು ದೃಢಪಡಿಸುತ್ತಾನೆ.[15] ಇನ್ನೊಂದು Claudiusನ ಆಳ್ವಿಕೆಯಲ್ಲಿ ಸಂಭವಿಸಿತು ಇದನ್ನು Tacitus ಮತ್ತು Suetonius ಇಬ್ಬರು ಉಲ್ಲೇಖಿಸುತ್ತಾರೆ.[16] ರೋಮನ್ನರು ಯೆರೂಸಲೇಮಿಗೆ ಮುತ್ತಿಗೆ ಹಾಕಿದ ಕಾರಣದಿಂದಾಗಿ, ಅನೇಕ ಬಡಜನರು ಹಸಿವಿನಿಂದಾಗಿ ಪಟ್ಟಣದ ಗೋಡೆಗಳ ಒಳಗೆ ಸತ್ತುಹೋದರು. Josephusನು ಬರಗಾಲವು ಸುಮಾರು ಆರನೂರು ಸಾವಿರದಷ್ಟು ಜನರನ್ನು ಬಲಿತೆಗೆದುಕೊಂಡಿತು ಎಂದು ಹೇಳುತ್ತಾರೆ.[17] ಆದರೂ, ಅವನ ಲೆಕ್ಕಾಚಾರ ಅತಿಯಾಗಿರಬಹುದು.

ಯೇಸುವಿನ ಭವಿಷ್ಯವಾಣಿ ಮತ್ತು ಯೆರೂಸಲೇಮಿನ ನಾಶನ ಕಾಲದ ಮಧ್ಯದಲ್ಲಿ ಅಸಂಖ್ಯಾತ ಭೂಕಂಪಗಳು ರೋಮನ್ ಲೋಕವನ್ನು ಕದಲಿಸಿಬಿಟ್ಟವು. ಇನ್ನಿತರ ಸ್ಥಳಗಳಲ್ಲಿ, ಅವು ಆಸ್ಯ ಸೀಮೆಯಲ್ಲಿ Laodiceaಯ ಮತ್ತು ಇಟಲಿಯಲ್ಲಿ Pompeiiಯ ಮೇಲೆ ಆಕ್ರಮಣ ಮಾಡಿದವು (ಕ್ರಿ.ಶ. 62).[18] ಭೂಕಂಪಗಳು ಮೇಲಿಂದ ಮೇಲೆ ಭವಿಷ್ಯ ದರ್ಶನದ ಸಾಹಿತ್ಯದಲ್ಲಿ ದೈವೀಕ ನ್ಯಾಯತೀರ್ಪಿನ ಪ್ರತಿಕವಾಗಿ ಉಲ್ಲೇಖಿಸಲ್ಪಟ್ಟಿವೆ (ಪ್ರಕಟಣೆ 6:12; 8:5; 11:13, 19; 16:18). ಈ ಪಟ್ಟಿಗೆ ಲೂಕ 21:11 ಸೇರಿಸುತ್ತಾನೆ. "ಉಪದ್ರವಗಳು" ಅಲ್ಲದೇ "ಉತ್ಪಾತಗಳು ಆಕಾಶದಿಂದ ಮಹಾಸೂಚನೆಗಳು" ಬರುವವು.

**ವಚನ 8.** ಯೇಸು ಈ ಸಂಗತಿಗಳನ್ನು **ಇವೆಲ್ಲಾ [ನೂತನಕಾಲವು ಹುಟ್ಟುವ] ಪ್ರಸವವೇದನೆಯ ಪ್ರಾರಂಭ** ಎಂದು ಪ್ರಸ್ತಾಪಿಸಿದನು. ಶಿಷ್ಯರು ಯುದ್ಧಗಳ, ಬರಗಾಲದ ಮತ್ತು ಭೂಕಂಪಗಳಾಗುವ ಸುದ್ದಿಯನ್ನು ಕೇಳುವಾಗ, ಅವರು ಎಚ್ಚರಗೊಳ್ಳಲಿಲ್ಲ. ಈ ಸಂಗತಿಗಳು ಕೇವಲ ಭವಿಷ್ಯತ್ತಿನಲ್ಲಿ ನಡೆಯುವ ಸಂಗತಿಗಳಿಗೆ ಮುನ್‌ಸೂಚನೆಗಳು. ಪ್ರಸವೇದನೆ ಪಡುವ ಸ್ತ್ರೀಯ ಚಿತ್ರಣವನ್ನು ಸತ್ಯವೇದದಲ್ಲಿ ಅನೇಕ ಸಾರಿ ಉಪಯೋಗಿಸಲಾಗಿದೆ, ದೈವೀಕ ನ್ಯಾಯ ತೀರ್ಪಿನಿಂದಾಗಿ ತಕ್ಷಣದಲ್ಲಿ ಬರುವ ದೊಡ್ಡ ನಾಶನವನ್ನು ಸೂಚಿಸುವದಕ್ಕಾಗಿದೆ.[19] ಯೆಹೂದ್ಯ ಗುರುಗಳು ಮೆಸ್ಸೀಯನ ಬರುವಿಕೆಗೆ ಸಂಬಂಧಿಸಿದಂತೆ "ಪ್ರಸವವೇದನೆಗಳ" ಕುರಿತು ಮಾತಾಡುವಾಗ, ಅವರು ಮೆಸ್ಸೀಯನು ಬರುವ ಪೂರ್ವದಲ್ಲಿ ಯೆಹೂದ್ಯರು ಅನುಭವಿಸುವ ಸಂಕಟಗಳನ್ನು ಉಲ್ಲೇಖಿಸುತ್ತಿದ್ದರು.[20] ಈ ಸಂದರ್ಭದಲ್ಲಿ, ಯೇಸು ಯೆರೂಸಲೇಮಿನ ದೈವೀಕ ನ್ಯಾಯತೀರ್ಪಿಗೆ ಸಂಬಂಧಿಸಿದಂತೆ, ಅದು ಆತನ ಎರಡನೇ ಬರೋಣದಲ್ಲಿ ನಡೆಯುವದನ್ನು ಎಂಬುದನ್ನು ತಿಳಿಸಲು ಉಪಯೋಗಿಸುತ್ತಿದ್ದಾನೆ.

## "ನಿಮಗೆ ಬರುವ ಅನೇಕ ಶೋಧನೆಗಳಿಗೆ ಎಚ್ಚರವಾಗಿರಿ" (24:9-14)

**[9]ಆಗ ನಿಮ್ಮನ್ನು ಉಪದ್ರವಕ್ಕೆ ಒಪ್ಪಿಸಿ ಕೊಲ್ಲುವರು; ನನ್ನ ಹೆಸರಿನ ನಿಮಿತ್ತ ನಿಮ್ಮನ್ನು ಎಲ್ಲಾ ಜನಾಂಗಗಳವರು ಹಗೆಮಾಡುವರು. [10]ಆಗ ಅನೇಕರು ಹಿಂಜರಿದು ಒಬ್ಬರನ್ನೊಬ್ಬರು ಹಿಡುಕೊಡುವರು; ಒಬ್ಬರ ಮೇಲೊಬ್ಬರು ದ್ವೇಷಮಾಡುವರು. [11]ಬಹುಮಂದಿ ಸುಳ್ಳುಪ್ರವಾದಿಗಳು ಸಹ ಎದ್ದು ಅನೇಕರು ಮೋಸಗೊಳಿಸುವರು. [12]ಇದಲ್ಲದೆ ಅಧರ್ಮವು ಹೆಚ್ಚಾಗುವದರಿಂದ ಬಹು ಜನರ ಪ್ರೀತಿಯು ತಣ್ಣಗಾಗಿಹೋಗುವದು. [13]ಆದರೆ ಕಡೇ ವರೆಗೂ ತಾಳುವವನು ರಕ್ಷಣೆಹೊಂದುವನು. [14]ಇದಲ್ಲದೆ ಪರಲೋಕ ರಾಜ್ಯದ ಈ ಸುವಾರ್ತೆಯು ಸರ್ವಲೋಕದಲ್ಲಿ ಎಲ್ಲಾ ಜನಾಂಗಗಳಿಗೆ ಸಾಕ್ಷಿಗಾಗಿ ಸಾರಲಾಗುವದು; ಆಗ ಅಂತ್ಯವು ಬರುವದು.**

**ವಚನ 9.** ಯೇಸು ತನ್ನ ಶಿಷ್ಯರನ್ನು ಜನರು ಅವರನ್ನು ಹೇಗೆ ನಡೆಸಿಕೊಳ್ಳುವರು ಎಂಬುದರ ಕುರಿತು ಎಚ್ಚರಿಸುತ್ತಾನೆ. ಆತನು ಹೀಗೆ ಹೇಳುವಾಗ, **ನಿಮ್ಮನ್ನು ಉಪದ್ರವಕ್ಕೆ ಒಪ್ಪಿಸಿ ಕೊಲ್ಲುವರು** ಎಂದು ಅರ್ಥ. ಆತನು ತಾನು ಏನೆಂದು ಅರ್ಥೈಸಿದ್ದನೋ ಅದನ್ನು ವಿವರಿಸಿದನು. ಆತನು ಯುಗದ ಸಮಾಪ್ತಿಯಲ್ಲಿ ಉಪದ್ರವದ ಸಮಯವೆಂದು ಹೇಳುತ್ತಿಲ್ಲ ಆದರೆ ಅಪೋಸ್ತಲರು ತಾವೇ ಅನುಭವಿಸುವ ಹಿಂಸೆಯ ಕುರಿತಾಗಿ ಹೇಳುತ್ತಿದ್ದಾನೆ. ಅವರನ್ನು ಸ್ಥಾನಿಕ ನ್ಯಾಯಲಯ (ಯೆಹೂದ್ಯರ ಮಹಾಸಭೆ), ದೇಶಾಧಿಪತಿಗಳು ಮತ್ತು ಅರಸರ ಮುಂದೆ ತರುವರು. ಅವರನ್ನು ಮಹಾದೇವಾಲಾಯದಲ್ಲಿ ಕೊರಡೆಯಿಂದ ಹೊಡೆಯುವರು, ಸೆರಮನೆಯಲ್ಲಿ ಹಾಕುವರು ಮತ್ತು ಮರಣಕ್ಕೆ ಸಹ ಒಪ್ಪಿಸಿಕೊಡುವರು (ಮಾರ್ಕ 13:9). ಇದೆಲ್ಲವು ಅವರು ಸುವಾರ್ತೆಯನ್ನು ಸಾರುತ್ತಿರುವದರಿಂದ ಸಂಭವಿಸುವದು (ನೋಡಿರಿ 10:17, 18; 23:34ರ ಮೇಲಿನ ವ್ಯಾಖ್ಯಾನ).

ಕರ್ತನು **ನನ್ನ ಹೆಸರಿನ ನಿಮಿತ್ತ ಎಲ್ಲಾ ಜನಾಂಗಗಳವರು ಹಗೆ ಮಾಡುವರು** ಎಂದು ಸಹ ಹೇಳಿದನು (ನೋಡಿರಿ 10:22ರ ಮೇಲಿನ ವ್ಯಾಖ್ಯಾನ). ಕ್ರಿ.ಶ. 64ರಲ್ಲಿ ಕ್ರೈಸ್ತರ ಮೇಲೆ ನಡೆದ Neros ಹಿಂಸೆಯನ್ನು ದಾಖಲಿಸುವಾಗ, Tacitus ರವರು ಅದನ್ನು "ಕುಪ್ರಸಿದ್ಧ ನೀತಿ ಭ್ರಷ್ಟರು" ಮತ್ತು ಅವರ ಧರ್ಮವು "ಭಯಂಕರವಾದ ಮೂಡನಂಬಿಕೆ" ಮತ್ತು ಅವರ ಆಚಾರಗಳು "ಕೀಳುಮಟ್ಟದವು ಮತ್ತು ನಾಚಿಕೆತರಿಸುವಂತವುಗಳು" ಎಂದು ವರ್ಣಿಸುತ್ತಾರೆ. ಅವರು ರೋಮಾ ಪಟ್ಟಣವನ್ನು ಬೆಂಕಿಯ ಮೇಲೆ ನಿಂತಂತೆ ಇಟ್ಟಿರುವದಕ್ಕಾಗಿ ಅಪರಾಧಿ ಮನೋ ಭಾವ ಇಲ್ಲದೇ ಹೋದಾಗ್ಯೂ, Neros ಚಕ್ರವರ್ತಿ ಇವರ ಮೇಲೆ ತಪ್ಪನ್ನು ಹೊರಿಸುತ್ತಾನೆ ಯಾಕೆಂದರೆ: "ಮಾನವ ಕುಲವು ಅವರನ್ನು ಅಸಹ್ಯಪಟ್ಟುಕೊಳ್ಳುತಿತ್ತು."[21]

**ವಚನ 10.** ಯೇಸು ಈ ಸಮಯದಲ್ಲಿ ಪ್ರಕಟವಾಗುವ ಇತರ ಸಂಗತಿಗಳನ್ನು ಮುನ್‌ಸೂಚಿಸಿದನು: ಅನೇಕ ಕ್ರೈಸ್ತರು ಬಿದ್ದುಹೋಗುವರು, ಬಹುಶಃ ಹಿಂಸೆಯಿಂದಾಗಿ (ನೋಡಿರಿ 1 ಪೇತ್ರ 1:6, 7; 4:12-19). **ಆಗ ಅನೇಕರು ಹಿಂಜರಿದು** (*skandalizō*) **ಒಬ್ಬರನ್ನೊಬ್ಬರು ಹಿಡುಕೊಡುವರು; ಒಬ್ಬರ ಮೇಲೊಬ್ಬರು ದ್ವೇಷಮಾಡುವರು** ಎಂದು ಹೇಳಿದನು. H. Leo Boles ರವರು ಹೀಗೆ ಬರೆದಿದ್ದಾರೆ,

> ಹಿಂಸೆಗೆ ಅವರನ್ನು ಒಪ್ಪಿಸಿಕೊಡುವಾಗ ಅನೇಕರು ಎಡವಿಬೀಳುವರು; ಕೆಲವರು ತಮ್ಮ ಮೇಲೆ ಬರುವ ಕಠಿಯಾದ ಹಿಂಸೆಯಿಂದ ತಪ್ಪಿಸಿಕೊಳ್ಳಲು ಕೆಲವರು ಧರ್ಮತ್ಯಾಗ ಮಾಡುತ್ತಾರೆ, ಕೆಲವು ಶಿಷ್ಯರು ಸಹ ಇತರ ಶಿಷ್ಯರನ್ನು ಹಿಡಿದುಕೊಡುತ್ತಾರೆ ಮತ್ತು ಅವರನ್ನು ಉಪದ್ರವ ನೀಡುವವರಿಗೆ ಒಪ್ಪಿಸಿಕೊಡುತ್ತಾರೆ.[22]

**ವಚನ 11. ಬಹುಮಂದಿ ಸುಳ್ಳುಪ್ರವಾದಿಗಳು** ಏಳುವರು ಅವರು ಶಿಷ್ಯರನ್ನು ತಮ್ಮ ಹಿಂದೆ ಎಳೆದುಕೊಂಡು ಹೋಗುವರು. ಆದಿ ಸಭೆಯು ಸುಳ್ಳು ಪ್ರವಾದಿಗಳೆಂಬ ಪಿಡುಗಿನಿಂದ ತುಂಬಿತ್ತು. ಪೌಲನು ಹೀಗೆ ಬರೆಯುತ್ತಾನೆ, "ಸುಳ್ಳು ಸಹೋದರರು ಅಲ್ಲಿ

ಇದ್ದದರಿಂದ ... ಕ್ರಿಸ್ತ ಯೇಸುವಿನಲ್ಲಿ ನಮಗೆ ದೊರಕಿರುವ ಸ್ವಾತಂತ್ರ್ಯವನ್ನು ಗೂಢವಾಗಿ ವಿಚಾರಿಸುವದಕ್ಕೆ ಮರೆಸಿಕೊಂಡು ಬಂದವರು'' (ಗಲಾತ್ಯ 2:4). ಅವನು ಬರಲಿಕ್ಕಿರುವ ವಚನ ಭ್ರಷ್ಟತೆಯ ಕುರಿತು ಮಾತನಾಡುತ್ತಾನೆ "ಅಧರ್ಮ ಸ್ವರೂಪದ ರಹಸ್ಯ'' "ಈಗಾಗಲೇ ಕಾರ್ಯನಿರತವಾಗಿದೆ'' (2 ಥೆಸಲೋನಿಕ 2:3, 7). ಪೇತ್ರನು ಸುಳ್ಳು ಬೋಧಕರ ಕುರಿತಾಗಿ ಎಚ್ಚರಿಕೆಯನ್ನು ನೀಡುತ್ತಾನೆ, "ಅವರು ನಾಶಕರವಾದ ಮತಬೇದಗಳನ್ನು ಕಳ್ಳತನದಿಂದ ಹುಟ್ಟಿಸುವವರೂ ತಮ್ಮನ್ನು ಕೊಂಡುಕೊಂಡ ಒಡೆಯನನ್ನು ಕೂಡ ಅರಿಯೆವು ಎಂದು ಹೇಳು ವವರೂ ಆಗಿದ್ದು ಪಕ್ಕನೆ ತಮ್ಮ ಮೇಲೆ ನಾಶನವನ್ನು ಬರಮಾಡಿಕೊಳ್ಳುವರು'' (2 ಪೇತ್ರನ 2:1). ಯೋಹಾನನು ಅಂತ್ಯ ಕ್ರಿಸ್ತನ ಕುರಿತು ಮಾತನಾಡುತ್ತಾನೆ ಮತ್ತು ಹೀಗೆ ಹೇಳುತ್ತಾನೆ. ಅವರಲ್ಲಿ "ಅನೇಕರು'' ಈಗಾಗಲೇ ಕಾಣಿಸಿಕೊಂಡಿದ್ದಾರೆ (1 ಯೋಹಾನ 2:18, 19). ಅವನು ಹೀಗೆ ಸಹ ಎಚ್ಚರಿಸುತ್ತಾನೆ, "ಅನೇಕ ಮಂದಿ ಸುಳ್ಳು ಪ್ರವಾದಿಗಳು ಲೋಕದೊಳಗೆ ಹೊರಟುಹೋಗಿದ್ದಾರೆ'' (1 ಯೋಹಾನ 4:1). ಅಂದಿನಿಂದ ಲೋಕವು ಅನೇಕ ಸುಳ್ಳು ಪ್ರವಾದಿಗಳನ್ನು ನೋಡಿದೆ.

**ವಚನ 12.** ಯೆರೂಸಲೇಮ ನಾಶನವಾಗುವ ಮೊದಲು **ಅಧರ್ಮ ಸ್ವರೂಪವು** ಹೆಚ್ಚಾಗುವದು ಎಂದು ಯೇಸು ಹೇಳಿದನು. ಅನೇಕ ಕ್ರೈಸ್ತರ ಕ್ರಿಸ್ತನ ಮತ್ತು ಆತನ ಸಭೆಯ ಮೇಲಿರುವ **ಪ್ರೀತಿಯು ತಣ್ಣಗಾಗಿ ಹೋಗುವದು.** ಇದರ ಒಂದು ಉದಾಹರಣೆ ಪ್ರಕಟನೆಯಲ್ಲಿ ಕಂಡುಬರುತ್ತದೆ ಅಲ್ಲಿ ಯೇಸು ಎಫೆಸೆಯ ವಿಶ್ವಾಸಿಗಳ ಮೇಲೆ ತಪ್ಪುಹೊರಿಸುತ್ತಾನೆ ಯಾಕಂದರೆ ಅವರು "ಮೊದಲು ಅವರಿಗಿದ್ದ ಪ್ರೀತಿಯನ್ನು ಬಿಟ್ಟುಬಿಟ್ಟಿದ್ದಾರೆ'' (ಪ್ರಕಟಣೆ 2:4).

**ವಚನ 13.** ವಿವಿಧ ಹಂತದ ವಚನಭ್ರಷ್ಟತೆಯನ್ನು ಚರ್ಚಿಸಿದ ನಂತರ, ಕರ್ತನು ತನ್ನ ಹಿಂಬಾಲಕರಿಗೆ **ಕಡೇವರೆಗೂ ತಾಳುವವನು ರಕ್ಷಣೆಹೊಂದುವನು** ಎಂಬ ಭರವಸೆ ನೀಡುತ್ತಾನೆ. ಈ ವಾಗ್ದಾನವು ವಿಶ್ವಾಸಿಯ ನಿತ್ಯವಾದ ರಕ್ಷಣೆಯನ್ನು ಒಳಗೊಂಡಿದೆ. ಒಬ್ಬನು "ಜೀವವೆಂಬ ಜಯಮಾಲೆಯನ್ನು'' ಹೊಂದಲು "ಮರಣದ ಮಟ್ಟಿಗೂ ನಂಬಿಗಸ್ತನಾಗಿರ ಬೇಕು'' (ಪ್ರಕಟಣೆ 2:10; NIV). ಈ ವಚನದಲ್ಲಿ, "ಅಂತ್ಯ'' (*telos*) ಇದು ಒಬ್ಬನ ದೈಹಿಕ ಮರಣದವರೆಗೆ ಎಂಬುದನ್ನು ಉಲ್ಲೇಖಿಸುತ್ತದೆ. ಇದು ವಚನ 3ರಲ್ಲಿ "ಯುಗದ ಸಮಾಪ್ತಿಯನ್ನು'' ಉಲ್ಲೇಖಿಸುತ್ತದೆ (ನೋಡಿರಿ 10:22ರ ಮೇಲಿನ ವ್ಯಾಖ್ಯಾನ).

**ವಚನ 14.** ಯೇಸು ಮುಂದುವರೆದು ಹೀಗೆ ಹೇಳುತ್ತಾನೆ, **ಇದಲ್ಲದೆ ಪರಲೋಕ ರಾಜ್ಯದ ಈ ಸುವಾರ್ತೆಯು ಸರ್ವಲೋಕದಲ್ಲಿ ಎಲ್ಲಾ ಜನಾಂಗಗಳಿಗೆ ಸಾಕ್ಷಿಗಾಗಿ ಸಾರಲಾಗುವದು; ಆಗ ಅಂತ್ಯವು ಬರುವದು.** ಈ ವಚನವನ್ನು ಹೇಗೆ ಈ ಪದಗಳು "ಸರ್ವಲೋಕ'' (*oikoumenē*) ಮತ್ತು "ಅಂತ್ಯ'' (*telos*) ವ್ಯಾಖ್ಯಾನಿಸಲಾಗಿದೆ ಎಂಬ ಆಧಾರದ ಮೇಲೆ ಎರಡು ಬೇರೆ ಬೇರೆ ವಿಧದಲ್ಲಿ ಅರ್ಥೈಸಬಹುದು. ಒಂದು ಸಾಧ್ಯತೆ ಎಂದರೆ ಕರ್ತನ ಹೇಳಿಕೆಯು ಸುವಾರ್ತೆಯು ಸರ್ವಲೋಕದಲ್ಲಿ ಎಲ್ಲಾ ಜನಾಂಗಗಳಿಗೆ ಆತನ ಎರಡನೆಯ ಬರೋಣದ ಪೂರ್ವದಲ್ಲಿ ಮತ್ತು ಯುಗದ ಸಮಾಪ್ತಿಯಲ್ಲಿ ಸಾರಲ್ಪಡುವದು ಎಂದು ಸೂಚಿಸುತ್ತದೆ. ಈ ಸಂಗತಿಯಲ್ಲಿ "ಅಂತ್ಯ'' ಎಂಬ ಪದವು ವಚನ 3ರಲ್ಲಿರುವ ಪದದ ಅರ್ಥವನ್ನೇ ಹೊಂದಿದೆ.

ಹೆಚ್ಚು ಸಾಧ್ಯತೆಯಿರುವದೆಂದರೆ ಸುವಾರ್ತೆಯು ಯೆರೂಸಲೇಮಿನ ನಾಶನಕ್ಕೆ ಪೂರ್ವದಲ್ಲಿ ಇಡೀ ರೋಮನ್ ಲೋಕಕ್ಕೆ ಸಾರಲಾಗುವದು.[23] ಪಂಚಾಶತ್ತಮ ದಿನದಂದು ಯೆಹೂದ್ಯರು ಮತ್ತು ರೋಮನ್ ಸಾಮ್ರಾಜ್ಯದಿಂದ ಮತಾಂತರ ಹೊಂದಿದ ಎಲ್ಲರು ಯೆರೂಸಲೇಮಿನಲ್ಲಿ ಇದ್ದರು (ಅಪೊಸ್ತಲರ ಕೃತ್ಯಗಳು 2:5-12), ಮತ್ತು ಅವರಿಗೆ ಸುವಾರ್ತೆಯನ್ನು ಆಲಿಸುವ ಮತ್ತು ವಿಧೇಯರಾಗುವ ಅವಕಾಶ ದೊರೆಯಿತು. ಅವರಲ್ಲಿ ಅನೇಕರು ಕ್ರಿಸ್ತನನ್ನು ನಂಬುವವರಾದರು ಅವರು ತಮ್ಮ ತಾಯ್ನಾಡಿಗೆ ಮರಳಿದರು ಮತ್ತು ಅಲ್ಲಿ ಸುವಾರ್ತೆಯನ್ನು ಹಂಚಿದರು ಎಂಬುದರಲ್ಲಿ ಸಂಶಯವಿಲ್ಲ. ಮುಂದೆ ಹಿಂಸೆಯಿಂದಾಗಿ

ಸಭೆ ಯೆರೂಸಲೇಮಿನಿಂದ ಚದುರಿಹೋದದ್ದರ ಪರಿಣಾಮವಾಗಿ ಸುವಾರ್ತೆಯು ಯೂದಾಯ ಮತ್ತು ಸಮಾರ್ಯದುದ್ದಕ್ಕೂ ಹರಡಿತು (ಅಪೊಸ್ತಲರ ಕೃತ್ಯಗಳು 8:4). ಇನ್ನೂ ಮುಂದೆ, ಅಪೊಸ್ತಲರ ಸುವಾರ್ತಾ ಸೇವೆಯ ಪ್ರಯಾಣಗಳು ಪರಿಣಾಮವಾಗಿ ಸುವಾರ್ತೆಯು ಅನೇಕ ಪರದೇಶಗಳನ್ನು ತಲುಪಿತು, ರೋಮಾ ಸಾಮ್ರಾಜ್ಯವನ್ನು ತುಂಬಿಸಿತು. ಕ್ರಿ.ಶ. 57ರ ಸುಮಾರಿಗೆ ಪೌಲನು ಕೀರ್ತನೆ 19:4ನ್ನು ಉಲ್ಲೇಖಿಸಿ ಹೀಗೆ ಹೇಳುತ್ತಾನೆ, "ಸಾರುವವರ ಧ್ವನಿಯು ಭೂಮಿಯಲ್ಲೆಲ್ಲಾ ಪ್ರಸರಿಸಿತು, ಅವರ ನುಡಿಗಳು ಲೋಕದ ಕಟ್ಟ ಕಡೆಯವರೆಗೂ ವ್ಯಾಪಿಸಿದವು" (ರೋಮಾಪುರ 10:18).[24] ಮುಂದೆ ಕ್ರಿ.ಶ. 62ರಲ್ಲಿ ಪೌಲನು, "ಸುವಾರ್ತೆಯು ನಿಮ್ಮಲ್ಲಿಗೆ ಬಂದಂತೆಯೇ ಸರ್ವಲೋಕಕ್ಕು ಬಂತು" ಮತ್ತು ಅದು "ಪರಲೋಕದ ಕೆಳಗಿರುವ ಎಲ್ಲಾ ಸೃಷ್ಟಿಗೆ ಸಾರಲ್ಪಟ್ಟಿತು" (ಕೊಲಸ್ಸೆ 1:5, 6, 23). ಯೇಸು ಬಹುಶಃ ಹೀಗೆ ಹೇಳುತ್ತಿರಬಹುದು - ಯೆರೂಸಲೇಮಿನ ಪೂರ್ವದಲ್ಲಿ ಹಳೆಯ ದೈವೇಚ್ಛೆ - ಕ್ರಿ.ಶ. 70ರಲ್ಲಿ ನಾಶವಾಯಿತು, ಹೊಸ ದೈವೇಚ್ಛೆಯ ಸಂದೇಶ ರೋಮಾ ಸಾಮ್ರಾಜ್ಯವನ್ನು ಸೋಕಿ ಹೋಗುವಂತೆ ಮಾಡುತ್ತದೆ.

---

ಟಿಪ್ಪಣಿಗಳು

[1]Leon Morris, *The Gospel According to Matthew,* Pillar Commentary (Grand Rapids, Mich.: Wm. B. Eerdmans Publishing Co., 1992), 597. [2]Josephus *Antiquities* 17.10.5; 20.5.1. Josephus ರವರು ಬೇರೆ ಬೇರೆ ಸೂಚಿಸಿದಾಗೆಯೋ ಅಥವಾ ಕ್ರಮಾನುಸಾರವನ್ನು ಗಲಿಬಿಲಿ ಮಾಡಿದನೋ. [3]Ibid., 20.8.6. [4]Donald A. Hagner, *Matthew 14-28,* Word Biblical Commentary, vol. 33B (Dallas: Word Books, 1995), 691. [5]Suetonius *Twelve Caesars* 7.18-22; 8.5-12; 9.7-18. [6]Ibid., 10.4-8. [7]Robert A. Guelich, "Destruction of Jerusalem," in *Dictionary of Jesus and the Gospels,* ed. Joel B. Green and Scot McKnight (Downers Grove, Ill.: InterVarsity Press, 1992), 172. [8]Josephus *Antiquities* 20.11.1. [9]Josephus *Wars* 2.14.6–8. [10]Ibid., 2.15.5.

[11]Ibid., 2.17.2, 3. [12]Ibid., 2.17.2, 7, 8; 2.18.16. [13]Ibid., 2.18.1-5. [14]Guelich, 173. [15]Josephus Antiquities 3.15.3. [16]Tacitus Annals 12.43; Suetonius Twelve Caesars 5.18. [17]Josephus Wars 5.13.7. [18]Tacitus Annals 14.27; 15.22. [19]ಯೆಶಾಯ 48:6; ಯೆಶಾಯ 13:8; 21:3; 26:17; 42:14; ಯೆರೆಮೀಯ 4:31; 6:24; 13:21; 22:23; 30:6; 31:8; 48:41; 49:22, 24; 50:43; ಹೋಶೆಯ 13:13; 1 ಥೆಸಲೋನಿಕ 5:3. [20]Talmud *Ketuboth* 111a; *Sanhedrin* 97b, 98b; *Shabbath* 118a.

[21]Tacitus *Annals* 15.44. [22]H. Leo Boles, *A Commentary on the Gospel According to Matthew* (Nashville: Gospel Advocate Co., 1936), 461-62. [23]*Oikoumenē,* ಇದರ ಅರ್ಥಕ್ಕಾಗಿ, ನೋಡಿರಿ ಲೂಕ 2:1. ಮೊದಲನೆ ಶತಮಾನ ಕಾಲದಲ್ಲಿ, "ರೋಮನ್ನರು ಇಡೀ ಪ್ರಪಂಚ ಆಳುವವರೆಂದು ಕೊಂಡಿದ್ದರು" (*Josephus Antiquities 15.11.1*). [24]ರೋಮಾ ಪತ್ರಿಕೆಯ ಅಂತ್ಯದಲ್ಲಿ, ಪೌಲನು ಆತನು ಸಾರಿದ ಸುವಾರ್ತೆಯ ಬರೆದನು "ಯೆರೂಸಲೇಮಿನ್ನಿಂದ ಮತ್ತು ಸುತ್ತಲು ಸಾಧ್ಯವಾದಷ್ಟು ದೂರ Illyricum ರವರೆಗೆ," ಆದರೆ ಆತನು ಸ್ಪಷ್ಟವಾಗಿ Spain ವರೆಗೆ ಸಾರಲಿಲ್ಲ (ರೋಮಾಪುರ 15:19, 24, 28).